ಕಂದಾಯ ಇಲಾಖೆ)

ಉಪತಹಶೀಲ್ದಾರರ ಕಾರ್ಯಾಲಯ. ಮರಿಯಮ್ಮನಹಳ್ಳಿ ಇವರ ನ್ಯಾಯಾಲಯದಲ್ಲಿ

| ವಾದಿ | ಪ್ರತಿವಾದಿ |
| --- | --- |
| ಶ್ರೀ ಶಂಕರನಾಯ್ಕ ತಂದೆ ಲೇಟ್ ಕಶನ್ಯನಾಣ್ಯ<br>ಊರ್ಫ್ ಕೆ.ನಾಣ್ಯಾನಾಯ್ಕ<br>ತಾಳೆ ಬಸಾಪುರ ತಾಂಡ | 1. ಶ್ರೀ ದುರ್ಗ್ಯನಾಯ್ಕ, ತುಳಚ್ಯನಾಯ್ಕ<br>ತಂದೆ ತಾವರ್ಯನಾಯ್ಕ, ಟಿ.ಬಿ.ತಾಂಡ<br>2. ಶ್ರೀ ಲಂಬ್ಯಾನಾಯ್ಕ,<br>ತಂದೆ ಟೀಕ್ಯಾನಾಯ್ಕ ಟಿ.ಬಿ.ತಾಂಡ |

*******

ಪೀಠಿಕೆ:-

ಶ್ರೀ ಶಂಕರನಾಯ್ಕ ತಂದೆ ಲೇಟ್ ಕಶನ್ಯನನಾಣ್ಯ ಉರ್ಫ್ ಕೆ.ನಾಣ್ಯನಾಯ್ಕ ತಾಳೆ ಬಸಾಪುರ ತಾಂಡ ಇವರು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಒಂಟಿಗೋಡು ಗ್ರಾಮದ ಜಮೀನು ಸ.ನಂ. 144/2 ವಿಸ್ತೀರ್ಣ 5.36 ಎಕರೆ ಜಮೀನು ತಮ್ಮ ತಂದೆಯವರ ಹೆಸರಿನಲ್ಲಿದ್ದು ತಮ್ಮ ತಂದೆ ಮತ್ತು ತಾಯಿ ಮರಣ ಹೊಂದಿರುವ ಕಾರಣ ಪೋತಿ ವಾರಸು ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ವಂಶವೃಕ್ಷ ಮತ್ತು ಸಹೋದರಿಯರ ನಿರಾಕ್ಷೇಪಣಾ ಒಪ್ಪಿಗೆ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯ ಮೇರೆಗೆ ಹ.ಬ.ಸಂಖ್ಯೆ ಎಂ.ಆರ್.ಹೆಚ್.8/2014-15 ರಲ್ಲಿ ಪ್ರಕರಣ ದಾಖಲಿಸಿಕೊಂಡು, ನಮೂನೆ-21 ರಲ್ಲಿ ಗ್ರಾಮಲೆಕ್ಕಾಧಿಕಾರಿಗಳು, ಒಂಟಿಗೋಡು ಇವರು ಗ್ರಾಮದಲ್ಲಿ ಪ್ರಚುರಪಡಿಸಿದ ಮೇರೆಗೆ ನಿಗಧಿತ ಅವಧಿಯೊಳಗೆ ಪ್ರತಿವಾದಿಗಳು ದಿನಾಂಕ 23-02-2015 ರಂದು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ವಿಚಾರಣೆಗೆ ಹಾಜರಾಗಲು ನೋಟೀಸು ನೀಡಲಾಯಿತು. ಪ್ರಕರಣದ ವಿಚಾರಣೆಯನ್ನು ದಿನಾಂಕ 14-12-2015 ರಂದು ಪ್ರಾರಂಭಿಸಿ, ದಿನಾಂಕ 18-07-2016 ರಂದು ಮುಕ್ತಾಯಗೊಳಿಸಲಾಯಿತು.

ವಾದಿಗಳು ವಿಚಾರಣೆಗೆ ಹಾಜರಾಗಿ ವಾದವನ್ನು ಮಂಡಿಸುತ್ತಾ, ವಿವಾದಾಸ್ಪದ ಜಮೀನು ನನ್ನ ತಂದೆಯವರ ಹೆಸರಿನಲ್ಲಿದ್ದು, ತಂದೆ ಮತ್ತು ತಾಯಿ ಇಬ್ಬರು ಮರಣ ಹೊಂದಿರುವುದರಿಂದ ಪೋತಿ ವಾರಸು ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಕೋರುತ್ತಾ, ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಪ್ರತಿವಾಗಳು ವಾದವನ್ನು ಮಂಡಿಸುತ್ತಾ, ಸದರಿ ವಿವಾದಸ್ಪದ ಜಮೀನಿನಲ್ಲಿ ಸುಮಾರು 50-60 ವರ್ಷಗಳಿಂದ ಸಾಗು ಮಾಡುತ್ತಾ ಬಂದಿದ್ದು ತಾವುಗಳು ಸ್ವಾಧೀನಾನುಭವದಲ್ಲಿರುವುದರಿಂದ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ.

ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ.

1. ವಿವಾದಾಸ್ಪದ ಜಮೀನಿನ 1975-76 ರಿಂದ 1999-2000 ರ ವರೆಗಿನ ಕೈ ಬರಹ ಪಹಣಿ ಮತ್ತು 2015-16 ನೇ ಸಾಲಿನ ಪಹಣಿ ಪತ್ರಿಕೆಯ ಕಾಲಂ ನಂ.9 ರಲ್ಲಿ ಕಶನ್ಯನ ನಾಣ್ಯ ಎಂದು ನಮೂದಿರುವುದು ಕಂಡು ಬರುತ್ತದೆ.

2. ಶ್ರೀ ಕೆ.ನಾಣ್ಯನಾಯ್ಕ ಮತ್ತು ಅವರ ಹೆಂಡತಿಯಾದ ಶ್ರೀಮತಿ ಬದ್ಯಬಾಯಿ ಗಂಡ ನಾಣ್ಯ ನಾಯ್ಕ ಇವರುಗಳು ಮರಣ ಹೊಂದಿದ್ದು, ಹಾರುಪಡಿಸಿ ಮರಣ ಪ್ರಮಾಣ ಪತ್ರದಿಂದ ಕಂಡು ಬರುತ್ತದೆ.

3. ಶ್ರೀ ಶಂಕರ್ ನಾಯ್ಕ ರವರು ಶ್ರೀ ನಾಣ್ಯನಾಯ್ಕ ರವರ ಮಗನೆಂಬುದು ವಂಶ ವೃಕ್ಷದಿಂದ ಕಂಡು ಬರುತ್ತದೆ.

ಪ್ರತಿವಾದಿಗಳು ಪೂರಕ ದಾಖಲೆಗಳನ್ನು ಸಲ್ಲಿಸಿ ತಮ್ಮ ಹಕ್ಕನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

ಕಾರಣ ಮೇಲಿನ ಎಲ್ಲಾ ಅಂಶಗಳನ್ವಯ ಈ ಕೆಳಕಂಡಂತೆ.

## ಆದೇಶ

ಸಂ/ಕಂ/ನಾಕಮ/ತಕರಾರು/05/2015-16 ದಿನಾಂಕ 15-09-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆ ಸಂದರ್ಭ ವಾಸ್ತವಾಂಶ ಮತ್ತು ದಾಖಲೆಗಳನ್ವಯ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ, ಒಂಟಿಗೋಡು ಗ್ರಾಮದ ಸ.ನಂ. 144/2 ವಿಸ್ತೀರ್ಣ 5.36 ಎಕರೆ ಜಮೀನನ್ನು ವಹಿವಾಟು ಸಂಖ್ಯೆ 20 ರ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕಂದಾಯ ನಿರೀಕ್ಷಕರಿಗೆ ಆದೇಶಿಸಲಾಗಿದೆ.

ಉಪತಹಶೀಲ್ದಾರರು,
ನಾಡಕಛೇರಿ ಮರಿಯಮ್ಮನಹಳ್ಳಿ

ಗೆ,

ವಾದಿ ಮತ್ತು ಪ್ರತಿವಾದಿಗಳಿಗೆ.

ಪ್ರತಿಯನ್ನು ಭೂಮಿ ಶಾಖೆ, ಹೊಸಪೇಟೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

T
L M
ಶಂಕರನಾಯ್ಕ

ಹೊಸಪೇಟೆ.
TALUKA OFFICE, HOSPET.
16 SEP 2016
ಆವಕ ಸಂಖ್ಯೆ..........
ದಿನಾಂಕ..........